## ನಿಮ್ಮೊಡನೆ

# ಮೌಢ್ಯಪ್ರಸಾರ

ಜನತೆಯಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ಬೆಳೆಯಬೇಕು ಎಂಬುದು ಎಲ್ಲ ನಾಗರಿಕ ಸಮಾಜಗಳಲ್ಲಿ ಮೂಡುತ್ತಿರುವ ಪುರೋಗಾಮಿ ಚಿಂತನೆ. ಆದರೆ ಜನ ಜಾಗೃತರಾದರೆ ಜನರ ಮೌಢ್ಯವನ್ನು ಅವಲಂಬಿಸಿ ಬದುಕು ಸಾಗಿಸುತ್ತಿರುವ ಕೆಲವು ಸಮುದಾಯಗಳಿಗೆ ತೊಂದರೆ ಎಂಬ ಕಾರಣದಿಂದ ಪುರೋಗಾಮಿ ಚಿಂತನೆಯನ್ನು ಸಾಧ್ಯವಾದಷ್ಟೂ ನೇಪಥ್ಯಕ್ಕೆ ಸರಿಸುವ ಪ್ರಯತ್ನಗಳು ಸದಾಕಾಲ ನಡೆಯುತ್ತಿರುತ್ತವೆ.

ವಿಜ್ಞಾನದಲ್ಲಿ ಆಗಿರುವ ಸಂಶೋಧನೆಗಳಿಂದಾಗಿ ಇಂದಿನ ಸಾಮಾನ್ಯ ಜನರಿಗೂ ನಿಸರ್ಗದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಕಾರಣಗಳು ಗೊತ್ತಾಗುತ್ತಿವೆ. ಪ್ರತಿ ಹದಿನೈದು ದಿನಗಳಿಗೊಮ್ಮೆ ಆಗಸದಲ್ಲಿ ಪೂರ್ಣಚಂದ್ರನ ಬಿಂಬ ಮೂಡುವುದು, ಸೆಖೆ, ಚಳಿ ಮತ್ತು ಮಳೆ ನಿರ್ದಿಷ್ಟ ಕಾಲದಲ್ಲಷ್ಟೆ ಬರುವುದು, ಅಮಾವಾಸ್ಯೆಯಂದೇ ಸೂರ್ಯಗ್ರಹಣ, ಹುಣ್ಣಿಮೆಯಂದೇ ಚಂದ್ರಗ್ರಹಣ ಇತ್ಯಾದಿ ವಿದ್ಯಮಾನಗಳಿಗೆ ತರ್ಕಬದ್ಧ ಉತ್ತರಗಳು ಸಿಗುತ್ತಿವೆ. 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ' ಎಂದು ಹನ್ನೆರಡನೆಯ ಶತಮಾನದಲ್ಲಿ ಕಂಡಿದ್ದ ಕವಿಸಮಯದ ಬೆರಗಿಗೆ 'ಅದು ಗುರುತ್ವಾಶಕ್ತಿಯ ನಿಮಿತ್ತವಾಗಿ ಸಂಭವಿಸುವ ವಿದ್ಯಮಾನ' ಎಂಬ ವೈಜ್ಞಾನಿಕ ಕಾರಣ ಸಿಕ್ಕಿದೆ. ಅನಿರೀಕ್ಷಿತವಾಗಿ ಸಂಭವಿಸುವ ನೈಸರ್ಗಿಕ ಬದಲಾವಣೆಗಳಿಗೂ ಇಂದಿನ ವೈಜ್ಞಾನಿಕ ಜಗತ್ತು ಕಾರಣ ಹೇಳುತ್ತದೆ. ತನ್ನ ಸುತ್ತಲಿನ ಬೆಳವಣಿಗೆಗಳಿಗೆ ಕಾರಣಗಳನ್ನು ಹುಡುಕುವ ಮಾನವನ ಕುತೂಹಲದ ಪ್ರವೃತ್ತಿ ವಿಜ್ಞಾನದ ಬೆಳವಣಿಗೆಗೆ ಕಾರಣವಾದ ಸಂಗತಿ.

ಆದರೆ, ಹೊಸತನ್ನು ಹುಡುಕುವ ಮಾನವನ ಅದಮ್ಯ ಪ್ರವೃತ್ತಿಗೆ ಶತಮಾನಗಳ ಇತಿಹಾಸವಿದ್ದರೆ ಅಂಥ ಪ್ರವೃತ್ತಿಗೆ ಅಡ್ಡಗಾಲು ಹಾಕುವ ಪ್ರಯತ್ನಗಳಿಗೂ ಅಷ್ಟೇ ಇತಿಹಾಸವಿದೆ. ಶಸ್ತ್ರಬಲದಲ್ಲಿ ಜನಸಮುದಾಯದ ಮೇಲೆ ನಿಯಂತ್ರಣ ಹೊಂದಿದ ರಾಜ್ಯಾಡಳಿತ ವ್ಯವಸ್ಥೆ ಮತ್ತು ಜನರ ಭಾವನೆಗಳ ಮೇಲೆ ಹಿಡಿತ ಹೊಂದಿದ ಧಾರ್ಮಿಕ ವ್ಯವಸ್ಥೆಗಳು, ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿದ್ದ ಸಂಶೋಧನೆಯ ಹಾದಿಯಲ್ಲಿ ಕಲ್ಲು ಮುಳ್ಳಾಗಿರುವುದನ್ನು ಇತಿಹಾಸದಲ್ಲಿ ಕಾಣಬಹುದು. 'ಭೂಮಿ ಚಪ್ಪಟೆಯಾಗಿಲ್ಲ, ದುಂಡಗಿದೆ' ಎಂದು ಹೇಳಿದವರಿಗೆ ಧಾರ್ಮಿಕ ಕೇಂದ್ರಗಳು ಮರಣದಂಡನೆಯಂಥ ಕ್ರೂರ ಶಿಕ್ಷೆ ವಿಧಿಸುತ್ತಿದ್ದುದು ಇದಕ್ಕೆ ನಿದರ್ಶನ. 'ನಾವು ಹೇಳುತ್ತಿರುವುದಷ್ಟೆ ಸತ್ಯ, ಅದಕ್ಕೆ ವಿರುದ್ಧವಾದದ್ದು ಮಿಥ್ಯ. ಸುಳ್ಳು ಹೇಳುವುದಾಗಲೀ, ಪ್ರಸಾರ ಮಾಡುವುದಾಗಲೀ ಸಮುದಾಯದ ಒಳಿತಿಗೆ ಭಂಗ ತರುವಂಥದ್ದು, ಆದ್ದರಿಂದ ಇಂಥ ಪ್ರವೃತ್ತಿಯನ್ನು ಕ್ರೂರವಾಗಿ ನಿಗ್ರಹಿಸಬೇಕು' ಎಂಬುದಾಗಿ ಧಾರ್ಮಿಕ ಕೇಂದ್ರಗಳು ಹೇಳುತ್ತ ಜನಸಮುದಾಯದ ಚಿಂತನಾ ಕ್ರಮವನ್ನೇ ಸಂಕುಚಿತ ಚೌಕಟ್ಟಿಗೆ ಒಳಪಡಿಸಿದ್ದು ಜಗತ್ತಿನ ಎಲ್ಲ ದೇಶಗಳ ನಾಗರಿಕತೆಯ ಇತಿಹಾಸದಲ್ಲಿಯೂ ಕಾಣಬಹುದಾದ ಬೆಳವಣಿಗೆ.

ಜನತೆಯಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ಬೆಳೆಯಬೇಕು ಎಂಬುದು ಎಲ್ಲ ನಾಗರಿಕ ಸಮಾಜಗಳಲ್ಲಿ ಮೂಡುತ್ತಿರುವ ಪುರೋಗಾಮಿ ಚಿಂತನೆ. ಆದರೆ ಜನ ಜಾಗೃತರಾದರೆ ಜನರ ಮೌಢ್ಯವನ್ನು ಅವಲಂಬಿಸಿ ಬದುಕು ಸಾಗಿಸುತ್ತಿರುವ ಕೆಲವು ಸಮುದಾಯಗಳಿಗೆ ತೊಂದರೆ ಎಂಬ ಕಾರಣದಿಂದ ಪುರೋಗಾಮಿ ಚಿಂತನೆಯನ್ನು ಸಾಧ್ಯವಾದಷ್ಟೂ ನೇಪಥ್ಯಕ್ಕೆ ಸರಿಸುವ ಪ್ರಯತ್ನಗಳು ಸದಾಕಾಲ ನಡೆಯುತ್ತಿರುತ್ತವೆ. ಇದರಲ್ಲಿ ಅತ್ಯಾಧುನಿಕ ಮಾಧ್ಯಮಗಳನ್ನು ಬಳಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತವೆ. ಮುದ್ರಿತವಾದದ್ದನ್ನು ನಂಬುವ, ಪ್ರತಿಷ್ಠಿತರು ಮಾಡಿದ್ದೆಲ್ಲವನ್ನೂ ಅನುಕರಿಸುವ ಬಹುಸಂಖ್ಯೆಯ ಜನ ಇರುವ ನಮ್ಮ ದೇಶದಲ್ಲಿ ಇಂಥ ಮೌಢ್ಯ ಪ್ರಸಾರ ಪ್ರವೃತ್ತಿ ಒಟ್ಟಾರೆಯಾಗಿ ಸಮಾಜವನ್ನು ಹಿಂದೆ ಹಿಂದೆ ಸರಿಸುತ್ತ ಜನರ ಮೌಢ್ಯವನ್ನು ಬಂಡವಾಳವನ್ನಾಗಿಸಿ ಬದುಕುತ್ತಿರುವ ಸಮುದಾಯಕ್ಕೆ ಪರೋಕ್ಷವಾಗಿ ನೆರವಾಗುತ್ತಿದೆ.

ಬಾಹ್ಯಾಕಾಶ ಸಂಶೋಧನೆಯಲ್ಲಿ ದಾಪುಗಾಲಿಟ್ಟಿರುವ ಇಂದಿನ ವೈಜ್ಞಾನಿಕ ಜಗತ್ತು ಸೌರವ್ಯೂಹದ ಆಚೆಗಿನ ವಿದ್ಯಮಾನಗಳನ್ನು ನಿಶ್ಚಿತ ಲೆಕ್ಕಾಚಾರದ ಅನ್ವಯ ಗಮನಿಸುತ್ತಿರುವ ಚಿತ್ರಣಗಳನ್ನು ಟೆಲಿವಿಷನ್ ಮಾಧ್ಯಮ ಮೂಲಕ ಸಾಮಾನ್ಯ ಜನರಿಗೆ ತಲುಪಿಸುತ್ತಿರುವ ಬೆಳವಣಿಗೆ ಒಂದು ಕಡೆಯಾದರೆ, ಪುರಾಣೋಕ್ತ ಸಂಗತಿಗಳನ್ನು ಇದೇ ಆಧುನಿಕ ಸಂವಹನ ಮಾಧ್ಯಮವಾದ ಟೆಲಿವಿಷನ್ ಮೂಲಕವೇ ರಾಹು ಕೇತುಗಳನ್ನೂ, ಶನಿ ಗುರುಗಳನ್ನೂ ಹಣೆಬರಹದ ಲಿಪಿಕಾರರನ್ನಾಗಿ ಮಾಡಿ ಭೀತಿ ಹುಟ್ಟಿಸುವ ಮೂಲಕ ತಂತ್ರ, ವಾಮಾಚಾರ ಉದ್ಯಮಿಗಳಿಗೆ ಬದುಕಿನ ಮಾರ್ಗ ಕಲ್ಪಿಸುವ ಸಂಚು ಇನ್ನೊಂದು ಕಡೆ ವಿಜೃಂಭಿಸುತ್ತಿರುತ್ತದೆ. ಇದೆಲ್ಲ ಜಗತ್ತಿನ ಯಾವುದೇ ಮುಂದುವರಿದ ನಗರಕ್ಕೂ ಕಡಿಮೆ ಇಲ್ಲದ ಸೌಲಭ್ಯಗಳು ಲಭ್ಯವಿರುವ ಬೆಂಗಳೂರಿನಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ ಎಂದರೆ ಮೌಢ್ಯ ಪ್ರಪಂಚದ ಪ್ರಾಬಲ್ಯದ ಅರಿವಾಗುತ್ತದೆ.

ಜಪಾನ್‌ನಲ್ಲಿ ಸಂಭವಿಸಿದ ಪ್ರಬಲ ಭೂಕಂಪ ಮತ್ತು ಅದರಿಂದ ಉಂಟಾದ ಸುನಾಮಿ ಅಲೆಗಳ ಅಬ್ಬರದಿಂದ ಆದ ಸರಣಿ ಹಾನಿಗಳಿಗೆ ತಾರ್ಕಿಕ ಕಾರಣಗಳಿವೆ. ಇವುಗಳಿಂದ ಆಗಲಿರುವ ಹಾನಿಯಿಂದ ತಪ್ಪಿಸಿಕೊಳ್ಳಲು ವ್ಯಕ್ತಿಯಾಗಿ ಮಾಡಬಹುದಾದ ಕರ್ತವ್ಯಗಳಿವೆ. ಪರಿಸರ ವಿಜ್ಞಾನಿಗಳು ಸೂಚಿಸುವ ಮಾರ್ಗಗಳನ್ನು ನಿರ್ಲಕ್ಷಿಸಿ ತಾಯತ, ಹರಳುಗಳನ್ನು ಕಟ್ಟಿಕೊಳ್ಳುವುದರಿಂದ ವಿಕಿರಣದ ಹಾನಿಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದು ಸುಶಿಕ್ಷಿತರಲ್ಲಿಯೂ ಮೂಡಬೇಕಾದ ಜಾಗೃತಿ.

■ ಲಕ್ಷ್ಮಣ ಕೊಡಸೆ

